ಅತ್ತಿಗಿ ಅಣ್ಣ ನಿಗೆಣ್ಣೆ ನಾದಿನಿ ।
ವತ್ತಿ ಬರುವ ಕಷ್ಟ ಕೊಟ್ಟರೇನಂತೆ ॥
ಸೋತ್ತಮ ಸಿರಿಪ್ರಸನ್ನೆಂಕಟನೊಲುಮೆಗೆ ।
ಇತಿಮಿತಿಯಿಲ್ಲವೋ ಹಿತವಾಗಿರುವಿ ॥ ೩ ॥

## ಪಂಢರಾಪುರ ರಾಜ ವಿಠ್ಠಲಾ

### *೨೫.ಪಂಢರಾಪುರ ರಾಜವಿಠ್ಠಲಾ*

ರಾಗ : ತಿಲಂಗ ತಾಳ : ಕೇರವಾ

ಪಂಢರಾಪುರ ರಾಜವಿಠ್ಠಲಾ ॥ ಪ ॥

ಪಂಡಿತಾರ್ಚಿತ ಕುಂಡಲೀಶಘನ ।
ಪಾಂಡುರಂಗ ಹರೀಗೋಪಾಲಾ ॥ ಅ ॥

ಚತುರಾನನಪಿತ ಚತುರ್ಭುಜಾಂಕಿತ ।
ಚಟುಲರೂಪ ಚತುರಾಚ್ಯುತಮಹತಾ ॥
ಸತ್‌ಚಿತ್ತಾಕೃತ ಅಚಿಂತ್ಯಾದ್ಭುತ ।
ಚಿತ್ರಚರಿತ ಜಗದೇಕ ಜಾಗೃತಾ ॥ ೧ ॥

ಇಟ್ಟಿಗೆ ಮೇಲಿಟ್ಟ ಪುಟ್ಟ ಪಾದವು ।
ಸೃಷ್ಟಿಸಿತು ಪಾಪರಟ್ಟುಮಾಳ್ಪನದಿ ॥
ಕಟಿಯಲಿಟ್ಟಕರ ದುಷ್ಟಕೂಟದ ।
ಹುಟ್ಟಡಗಿಸಿದಾ ಸೃಷ್ಟಿಕರ್ತಪಿತ ॥ ೨ ॥

ನೊಸಲೋಳಿರಿಸಿದ ಕಸ್ತೂರಿ ತಿಲಕ ।
ಹಸನಾಗಿ ವೈಷ್ಣವ ಮುದ್ರೆಗಳೊಪ್ಪುವಾ ।
ವಸನ ಶ್ವೇತ ಶಶಿ ಸೂರ್ಯಾಭರಣ ।
ವಾಸುದೇವಪ್ರಸನ್ವೆಂಕಟರನ್ನಾ ॥ ೩ ॥



## ಕಾಲಜ್ಞಾನ *

### *೨೬. ಕಣಿಯ ಹೇಳುವೆನೆಂದು ಬಂದಳು ಕೊರವಂಜಿ*

ರಾಗ : ಮಾಲಕಂಸ ತಾಳ : ದಾದರಾ

ಕಣಿಯ ಹೇಳುವೆನೆಂದು ಬಂದಳು ಕೊರವಂಜಿ
ಓಣಿ ಓಣಿಯಲ್ಲಿ ನಿಂದಳು ಸಾರಿ ॥ ಪ ॥

ಧಣಿ ಶ್ರೀವೆಂಕಟರಮಣನ ಹೆಸರಲ್ಲಿ
ಆಣಿ ಮಾಡ್ಹೇಳುವೆ ಕೇಳೆಂದು ರಮಣಿ

ಕಲಿರಾಜ ಕಳಕೊಂಡ ನಾಲಕೂಕಾಲ
ಎಲ್ಲೆಲ್ಲೂ ತುಂಬೇದ ಸುಳ್ಳೀನಜಾಲಾ
ಶೀಲ–ನೇಮ–ವ್ರತ ಲೆಕ್ಕದೋಳಿಲ್ಲಾ
ಏಲ್ಲಾನೂ ಮಾಡೂದು ಬಡಕೂಳಿಗೆಲ್ಲಾ ॥ ೧ ॥

ತಾಯಿಯ ಜಾಗದಿ ನಾಯಿಯು ಕುಳಿತು
ಮಾಯ ಮಮತೆಗಳೆಲ್ಲಾ ಮರೆಯಾಗಿಹೋಯ್ತು
ದಾಯಾದಿಗಳಾಗಿ ಕಡಿದಾಡಿ ಬಂಧುಗಳು
ಸಾಯುವರು ಸಂಸಾರ ನಡುನೀರಲಿರಿಸಿ ॥ ೨ ॥

ಹೆತ್ತವರ ನೋಯಿಸಿ ಮತ್ತೆ ಸತಿಸುತರಲಿ
ಅತೀವ್ಯಾವೋಹವ ತೋರುತ್ತ ದಿನವಿಡಿ
ಲೆತ್ತದಾಟಗಳಲ್ಲಿ ವಿತ್ತಗಳಿಸುತಲ್ಲಿ
ಸತ್ತವರ ಹಣಕಾಗಿ ಸುತ್ತುವರು ಎಲ್ಲೆಲ್ಲಿ ॥ ೩ ॥

ಮಕ್ಕಳ ಮಾರುವವರು ಮೈಮನಮಾರುವವರು
ದಕ್ಕದ ನಿಧಿಗಾಗಿ ದಿಕ್ಕೆಟ್ಟು ತಿರುಗುವರು

---

* ಲೇಖಕರು ತಿಳಿಸಿದಂತೆ ಈ ಹಸ್ತಪ್ರತಿ ಜೀರ್ಣಾವಸ್ಥೆಯಲ್ಲಿ ಇರುವದರಿಂದ ಹಸ್ತಪ್ರತಿಯನ್ನು ಸ್ಕ್ಯಾನ ಮಾಡಲಾಗದಿದ್ದರಿಂದ ಹಸ್ತಪ್ರತಿಯನ್ನು ಈ ಗ್ರಂಥದಲ್ಲಿ ಮುದ್ರಿಸಲಾಗಿಲ್ಲ.

ಚೊಕ್ಕ ಬದುಕಿನಾಶೆ ಒಗ್ಗಲಾರದು ಮನಕೆ
ವಕ್ಕರಿಸಿ ಬದುಕಲು ಬಲವಿಲ್ಲ ಭುಜಕೆ ॥ ೪ ॥

ನನ್ನವರು ತನ್ನವರು ಯಾರಿಲ್ಲ ಜಗದಿ
ಮುನ್ನೂರು ಗಾಹೊತ್ತು ಕಳೆವರು ಕಪಟದಿ
ಧನದಾಶೆಗಾಗಿ ಘನವಂಚನೆಯಲ್ಲಿ
ನಾನಾಸೋಗುಗಳ್ಹಾಕಿ ಕುಣಿದಾರೊಕುಣಿಬಿಚ್ಚಿ ॥ ೫ ॥

ಸೂಳೆಯರ ಸಂತತಿಗೆ ಬಲಬಂದು ಜಗದಿ
ಗೆಲ್ಲುವರು ಎಲ್ಲೆಲ್ಲೂ ಕೈಮೇಲಾಗಿ
ಹಳ್ಳೀಯ ಮಳ್ಳೀಗೂ ಪದವೀಯಗೀಳ್ಹತ್ತಿ
ಒಳ್ಳೊಳ್ಳೆ ಮನುಜರ ತುಳಿದಾಳೊ ಬೆನ್ಹತ್ತಿ ॥ ೬ ॥

ತಾರುಣ್ಯ ತುಂಬಿ ಎಂಟನೆ ವಯದಿ
ತರಳೆ ಬಯಸುವಳು ಗಂಡನ ಗಾದಿ
ತರತರದ ವ್ಯಾಧಿ ರೋಗ ರುಜಿನಾದಿ
ಪರಿವಾರ ಕಾಣದೆ ತಿರುಗ್ಯಾರೊ ಜಗದಿ ॥ ೭ ॥

ಅರಿಷಿಣ ಕುಂಕುಮ ಸೌಭಾಗ್ಯ ಬೇಡಿ
ಪರದಾಡಬೇಕು ಪತಿಯೊಡನಾಡಿ
ಪರಪುರುಷರಕಣ್ಣು ಇವಳಮ್ಯಾಲೋಡಿ
ಹರಸೇದ ಸಂಸಾರ ಚೆಲ್ಲಾಟವಾಡಿ ॥ ೮ ॥

ಕ್ಷಣಿಕ ಸುಖಕ್ಕಾಗಿ ಬಡಿದಾಟಸಾಗಿ
ದಣಿದಾರೊ ಘನವಂತರೂ ಮೊದಲಾಗಿ
ಹೆಣ್ಣು–ಮಣ್ಣು–ಹೊನ್ನು ಮೂರಕ್ಕಸೊರಗಿ
ಹೆಣವಾದರೊ ಹಾಳು ಮಣ್ಣುಪಾಲಾಗಿ ॥ ೯ ॥

ಬಹುದೊಡ್ಡ ಮರ ಸಾಲು ಕಡಿದು ಪಟ್ಟಣಕ್ಕೆ
ದಹಿಸುವದು ಭೂಮಿಯ ತಾಪವು ಉಷ್ಣಕ್ಕೆ



ಕಹಿ ಕಹಿ ಅನುಭವ ಕೇಳರಿಯದಾವಸ್ಥೆ
ಗ್ರಹಿಕೆಗೂ ನಿಲುಕದೆ ಬೆಳೆದೀತು ಜನಸಂಖ್ಯೆ ॥ ೧೦ ॥

ಹಣಕೊಂದೆ ಜಗದಲಿ ಮಿಗಿಲಾದ ಹೆಸರು
ಮುನಿಗಳು ಮೊದಲಾಗಿ ಹಣದ್ಧಿಂದೆ ಬೀಳುವರು
ಗುಣ–ವಿದ್ಯೆ–ಸಾಧನೆಯು ಗೌಣಾಗಿ ಜನಕೆ
ಪುಣ್ಯ ಪಾಪದ ಹಾದಿ ಮರೆತಾರೊ ಸುಖಕೆ ॥ ೧೧ ॥

ನಾಳೆಬಿತ್ತುವ ಬೆಳೆ ಇಂದೇ ಬೆಳೆದರೂ
ಆಳು ಕಾಳಿಗಾಗಿ ಗೋಳಾಟತಪ್ಪದು
ಮಳೆಬೆಳೆಹಾನಿ ಕಾಲ ಬದಲಾವಣೆ
ಅಳತಾರೊಪುರಜನ ಉರುಳಾಗಿ ಜೀವನ ॥ ೧೨ ॥

ಜಪತಪನುಷ್ಠಾನ ಉಪಚಾರಗೋಷ್ಠಿ
ವ್ಯಾಪಾರಕಿಡತಾರೊ ಮಠಮಂತ್ರ ಶಕ್ತಿ
ಕೊಪ್ಪರಗಿಸಂಪತ್ತು ಕೂಡಿಟ್ಟು ಛಪರಾಸಿ
ಛಪ್ಪನ್ನದೇಶಕ್ಕೆ ಅಪರೂಪದಾವ್ಯಕ್ತಿ ॥ ೧೩ ॥

ಅತಿಯಾಗಿ ಧನಬಲ ಮತ್ತೇರಿ ಮದದಿ ।
ಹೆತ್ತ ತಂದೆ ತನ್ನ ಮಗಳ ಕಾಮಿಸುವಾ ॥
ಸತಿಪತಿಯಾಗುವರು ಅಣ್ಣತಂಗಿಯರು ।
ಯತಿಪೀಠ ತೊರೆದು ಸಂಸಾರಿಯಾಗುವನು ॥ ೧೪ ॥

ನಯ ವಿನಯ ನಡತಿ ನಾಜೂಕುಯಿಲ್ಲ ।
ಭಯ ಭೀತರಾಗಿ ಜನ ಬದುಕುವರುಯೆಲ್ಲ ॥
ಕಾಯದ ಶಕ್ತಿಗೂ ಮಿಗಿಲಾದ ಯಂತ್ರ ।
ಬಾಯ್ತೆರೆದು ಮಾಡಿತ್ತು ಜಗವ ಅತಂತ್ರ ॥ ೧೫ ॥

ದೇವರ ಮಾಡುವ ನೆಪದಲ್ಲಿ ಭಾರೀ ।
ಜೀವದ ಬಲಿ ನೀಡಿ ಕೇಕೆ ಹಾಕುತಲಿ ॥

ದೆವ್ವಭೂತ ಜಾತಕದಂಜಿಕೆ ಮುಂದಿಟ್ಟು ।
ಜೀವನ ನಡೆಸುವ ಜ್ಯೋತಿಷಿಗಳುಂಟು ॥ ೧೬ ॥

ದುರ್ವಿನಿತ ಮನದಿಂದ ರಾಜ್ಯವಾಳುವರು ।
ಕಾವಿಧರಿಸಿ ಕಪಟ ನಾಟಕವಾಡುವರು ॥
ಸಾವಿರ ಸಾವಿರ ವಂಚನೆಗಳೆಸಗಿ ।
ತಾವೇ ಈ ಜಗಕೆ ವಿಧಾತೃರೆನ್ನುವರು ॥ ೧೭ ॥

ಕೊಲೆಸುಲಿಗಿ ದರ್ಪದರೋಡೆಗಳು ಹೆಚ್ಚಿ ।
ಕಾಲನ್ನೇನಾಚಿಸುವ ನರನೇಪಿಶಾಚಿ ॥
ಸಾಲಸೂಲ ಮಾಡಿ ಹೊಟ್ಟೆ ಹೊರೆಯುವ ಸ್ಥಿತಿ ।
ಗುಳೆಯೆದ್ದು ಹೋಗುವರು ದೇಶ ದೇಶ ನೆಚ್ಚಿ ॥ ೧೮ ॥

ಹಗಲ ಹಾದರ ಮಾಡಿ ಒಪ್ಪಿಟ್ಟುಕೊಂಬರು ।
ತಗಲಬಾಜಿ ಮಂದಿ ಭರದಿಂದ ಮೆರೆದಾರು ॥
ಭೋಗ ಜೀವನವೇ ಭಾಗ್ಯವೆನ್ನುತ ಜನ ।
ಸಾಗಿ ಸೆರೆವಾಸದಿ ಮರುಗಿ ಸಾಯುವರು ॥ ೧೯ ॥

ಮಾಯ ಮಾಟ ಮಂತ್ರ ಪುರವಂತರಾದಿ ।
ಬಾಯ್ ಬಡುಕ ಜನಕಿದೆ ವ್ಯಾಪಾರ ಜಗದಿ॥
ಕಾಯ ಕಾಸಿನ ಬಲದಿ ರಾಮನೆಂದೆನಿಸೋದು ।
ಬಾಯಾರಿ ಬಂದವನ ಬಡಕೊಂಡು ತಿಂಬೋರು ॥೨೦

ಯಂತ್ರ ತಂತ್ರಗಳಾಡಂಬರ ಹೆಚ್ಚಿ ।
ಕುಂತಲ್ಲೇ ಕುಂತಳ ದೇಶವ ಸುತ್ತಿ ॥
ಭ್ರಾಂತಿ ಆತಂಕ ಆಕಾಶದಿ ಉಪಟಳ ।
ಸಂತೆ ನೆರೆವುದು ಪಂಥ ಪೈಪೋಟಿವುಂಟು ॥೨೧ ॥

ದ್ವಿಜರೆಲ್ಲ ನಿಜ ತೊರೆದು ವೃಜದಲ್ಲಿ ಬಳಲುವರು ।
ಗಜ ತುರಗ ಗೋಪಕ್ಷಿ ಸಂತತಿ ನಶಿಸುವದು ॥



ಬಾಜಿ ಪಂಥ ಕಟ್ಟಿ ವ್ಯಾಜ್ಯದ ಕೊಳೆಯುತ್ತ ।
ಮಜ ಮಸ್ತಿಗಾಗೇ ಜೀವನ ಸಾಗುವದು ॥ ೨೨ ॥

ಪತಿಯಿಂದ ದೂರಾಗಿ ಅತಿ ಬಳಲಿ ಬಾಯಾರಿ ।
ಸುತ್ಯಾಳೊಕತ್ತಲೆ ಲೋಕದಿಗಯ್ಯಾಳಿ ॥
ನಿತ್ಯನರಕ ಲೋಕ ಸುತ್ತಿದ ಅನುಭವ ।
ಸತ್ತೇನೆಂದರೂ ಬಿಡದು ನರಕೃತ ನಿಯಮ ॥ ೨೩ ॥

ವ್ಯಭಿಚಾರ-ದುರ್ಮಾಗದ್ವ್ಯಾಪಾರ ದೊಂಬಿ
ಸಭ್ಯರು ಮೊದಲಾಗಿ ದುರ್ವ್ಯಸನಿಯಾಗಿ
ಬರ್ಬರಕೃತ್ಯದಿ ಭಯಭೀತರಾಗಿ ಜನ
ಬೊಬ್ಬೆಯಿಟ್ಟರೊಬ್ಬರಿಹರಲ್ಲ ಕೇಳಿಲ್ಲಿ ॥ ೨೪ ॥

ಕೊರವಂಜಿ ನುಡಿದಾ ಮುಂಜಗದ ನಾಡಿ
ಪರಸನ್ನವೆಂಕಟದಾಸರು ನೋಡಿ
ಮೊರೆಹೊಕ್ಕುರು ಹರಿಗೆ ಪರಿಹಾರಬೇಡಿ
ಸಿರಿಪ್ರಸನ್ವೆಂಕಟರಾಯನ್ನಪಾಡಿ ॥ ೨೫ ॥

**ಓದುಗರಲ್ಲಿ ನಮ್ರ ವಿನಂತಿ**

**ಪುಟ ೪೦ ರಲ್ಲಿ ಕೊಟ್ಟ, ಸಮಗ್ರ ಪಟ್ಟಿಯಲ್ಲಿ ಇಲ್ಲದ ಶ್ರೀ ಪ್ರಸನ್ನ ವೆಂಕಟದಾಸರ ಕೃತಿಗಳು ತಮ್ಮ ಗಮನಕ್ಕೆ ಬಂದರೆ ದಯವಿಟ್ಟು ನಮಗೆ ಫೋನ್ / e-mail / ಪತ್ರದ ಮುಖಾಂತರ ತಿಳಿಸಿದರೆ ಈ ಪಟ್ಟಿಯನ್ನು ಪರಿಷ್ಕರಿಸಲು ಅನುಕೂಲವಾಗುವುದು. ಹಾಗೆ ಈ ಪಟ್ಟಿಯಲ್ಲಿ ಏನಾದರೂ ಲೋಪದೋಷಗಳಿದ್ದರೂ ಅದನ್ನು ನಮ್ಮ ಗಮನಕ್ಕೆ ತಂದರೆ, ಈ ಲೋಪ ದೋಷಗಳನ್ನು ತಿದ್ದಿಕೊಳ್ಳಲು ಸಹಾಯವಾಗುವದು.**

**- ಪ್ರಕಾಶಕರು**